# ಕರ್ನಾಟಕ ವಿಧಾನ ಸಭೆ

**ಬುಧವಾರ 25ನೇ ಮಾರ್ಚ್ 1998ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.**

**ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು**

## 1. ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

### ಲಿಂಗಸುಗೂರಿನಲ್ಲಿ 100 ಹಾಸಿಗೆಯ ಆಸ್ಪತ್ರೆ ನಿರ್ಮಾಣ

100 (685) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್ (ಲಿಂಗಸೂಗೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1) 1997-98 ನೇ ಸಾಲಿನಲ್ಲಿ ಲಿಂಗಸುಗೂರು ಪಟ್ಟಣಕ್ಕೆ ಮಂಜೂರಾದ 100 ಹಾಸಿಗೆಯ ಆಸ್ಪತ್ರೆಯ ಹೊಸ ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿದೆ?

2) ಸದರಿ ಕಟ್ಟಡಕ್ಕೆ ಸರ್ಕಾರವು ನಿಗದಿಪಡಿಸಿರುವ ಹಣವೆಷ್ಟು?

3) ಸದರಿ ಕಟ್ಟಡದ ಕಾಮಗಾರಿ ಯಾವಾಗ ಪ್ರಾರಂಭವಾಗಿ, ಯಾವಾಗ ಮುಕ್ತಾಯವಾಗುತ್ತದೆ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.) :

1) ಅಂದಾಜು ಪಟ್ಟಿ ಮಂಜೂರಾಗಿದ್ದು ಕೆಲಸ ಇನ್ನೂ ಶುರುವಾಗಬೇಕಾಗಿದೆ.

2) ರೂ. 79.35 ಲಕ್ಷಗಳು

3) ಜರ್ಮನ್ ಸರ್ಕಾರದ ಸಹಯೋಗದ ಯೋಜನೆಯಡಿ ಶೀಘ್ರವಾಗಿ ಕಟ್ಟಲು ಪ್ರಾರಂಭಿಸಲಾಗುವುದು.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸದರಿ ಕಟ್ಟಡದ ಕಾಮಗಾರಿಯು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ ಎಂದು ಕೇಳಿದ್ದಕ್ಕೆ ಜರ್ಮನ್ ಸರ್ಕಾರದ ಸಹಯೋಗದ ಯೋಜನೆಯಡಿ ಶೀಘ್ರವಾಗಿ ಕಟ್ಟಲು ಪ್ರಾರಂಭಿಸಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ದಿನಾಂಕವನ್ನು ನಿಖರವಾಗಿ ಹೇಳಿದರೆ ಅನುಕೂಲವಾಗುತ್ತದೆ ಎಂದು ಕೇಳಲಪೇಕ್ಷಿಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸುಮಾರು 80 ಕೋಟಿ ರೂ.ಗಳ ಜರ್ಮನ್ ಯೋಜನೆಯು ಗುಲ್ಬರ್ಗ ವಿಭಾಗಕ್ಕೆ ಮಂಜೂರಾಗಿದ್ದು, ಮೊದಲನೇ ಹಂತದಲ್ಲಿ 26 ಮತ್ತು ಎರಡನೇ ಹಂತದಲ್ಲಿ 25 ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಮಂಜೂರಾತಿ ಆಗಿದೆ. ಮೊದಲನೇ ಹಂತದಲ್ಲಿ ಲಿಂಗಸಗೂರಿನ 30 ಬೆಡ್‌ಗಳ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಏರಿಸುವುದು ಇದೆ.

ಅಧ್ಯಕ್ಷರು: ಅವರಿಗೆ ಅಷ್ಟೆಲ್ಲಾ ಸವಿಸ್ತಾರವಾದ ಉತ್ತರವು ಬೇಕಾಗಿಲ್ಲ. ವಾತಾವರಣವು ಹೀಗೆ ಇದೆ. ನಮ್ಮ ಕ್ಷೇತ್ರದಲ್ಲಿ ಈ ಆಸ್ಪತ್ರೆಯ ಕೆಲಸವು ಬೇಗ ಆಗಬೇಕು. ಅದರ ಕೀರ್ತಿ ತಮಗೆ ಸಲ್ಲಬೇಕೆಂಬುದು ನಮ್ಮ ಆಸೆ ಎಂದು ಹೇಳಿ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಏಪ್ರಿಲ್ ಈ ಬೃಹತ್ ಯೋಜನೆಯು ಗ್ರಾ್ಯಂಟ್ ಆಗಿ 85 ಪರ್‌ಸೆಂಟ್‌ನಷ್ಟು ಅಂದರೆ 80 ಕೋಟಿ ರೂ.ಗಳನ್ನು ಕೋಟ್ಟಿದ್ದಾರೆ. ಅದು ಉತ್ತರ ಕರ್ನಾಟಕದ ಭಾಗಕ್ಕೆ ಏಪ್ರಿಲ್‌ನಲ್ಲ ಇದನ್ನು ಲಾಂಚ್ ಮಾಡುತ್ತೇವೆ.

ಅಧ್ಯಕ್ಷರು: ಶುರು ಮಾಡುತ್ತಾರೆ, ತೊಂದರೆ ಇಲ್ಲ.

**ಪಾಂಡವಪುರದಲ್ಲಿ ಸರ್ಕಾರಿ ಕಾಲೇಜ್ ಮಂಜೂರಾತಿ**

102 (720) ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?